**ಸಾಕ್ಷಿಯನ್ನು ದಿನಾಂಕ 7.12.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಎನ್.ಹೆಚ್.ಎಂ ವಕೀಲರಿಂದಃ**

ದಿನಾಂಕ 12.2.2013 ರಂದು 2 ನೇ ಪ್ರತಿವಾದಿ ಮತ್ತು ಅವರ ಗಂಡ ಪದ್ಮಪ್ರಸಾದ್ ನಡುವೆ ನೋಂದಾಯಿತ ವಿಭಾಗಪತ್ರವಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವಿಭಾಗದಲ್ಲಿ ಖಾತ ನಂಬರ್ 14 ಮತ್ತು ಹೊಸ ಖಾತ ನಂಬರ್ 337/1 ರಲ್ಲಿ ಪೂರ್ವ-ಪಶ್ಚಿಮ 135 ಅಡಿ, ಉತ್ತರ-ದಕ್ಷಿಣ 52 ಅಡಿ ಆಸ್ತಿಯು 2 ನೇ ಪ್ರತಿವಾದಿಯ ಪಾಲಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿಯ ಖಾತೆಯನ್ನು 2 ನೇ ಪ್ರತಿವಾದಿಯು ತನ್ನ ಹೆಸರಿಗೆ ಮಾಡಿಸಿಕೊಂಡು ಕಂದಾಯವನ್ನು ಪಾವತಿ ಮಾಡಿಕೊಂಡು ಬರುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿಯನ್ನು ಅಡಮಾನ ಮಾಡಿ 2 ನೇ ಪ್ರತಿವಾದಿಯು 5 ನೇ ಪ್ರತಿವಾದಿ ಬ್ಯಾಂಕಿನಿಂದ 87 ಲಕ್ಷ ಹಣವನ್ನು ಸಾಲ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 2 ನೇ ಪ್ರತಿವಾದಿಯು ಸದರಿ ಸಾಲವನ್ನು ಮರುಪಾವತಿ ಮಾಡದಿದ್ದರಿಂದ 5 ನೇ ಪ್ರತಿವಾದಿಯು ಸರ್ಫೇಸಿಯಾ ಕಾಯ್ದೆಯಡಿ ನೋಟಿಸ್ ನೀಡಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ದಾವಆಸ್ತಿಯನ್ನು ಅರುಣ್‌ಗೌಡ ಎಂಬುವವರಿಂದ ಖರೀದಿ ಮಾಡುವ ಪೂರ್ವದಲ್ಲಿ ಸದರಿ ಆಸ್ತಿಯ ಖಾತೆಯು ಯಾರೆಲ್ಲ ಹೆಸರಿನಲ್ಲಿತ್ತು ಎಂದರೆ ಸಾಕ್ಷಿದಾರರು ಬ್ರಹ್ಮದೇವಯ್ಯ ನವರ ಹೆಸರಿನಲ್ಲದ್ದು, ನಂತರ ಜಗದೀಶ್ ಎಂಬುವವರ ಹೆಸರಿಗೆ ಬಂದು, ಅರುಣ್‌ಗೌಡ ರವರು ಖರೀದಿ ಮಾಡಿದಾಗ ಅವರ ಹೆಸರಿಗೆ ಆಗಿದ್ದು, ನಂತರ ನಾನು ಖರೀದಿ ಮಾಡಿರುತ್ತೇನೆ ಎನ್ನುವರು. ಬ್ರಹ್ಮದೇವಯ್ಯನವರ ಹೆಸರಿನಲ್ಲಿದ್ದ ಬಗ್ಗೆ ದಾಖಲೆಯನ್ನು ನನ್ನ ವಕೀಲರಿಗೆ ನೀಡಿರುತ್ತೇನೆ. ಸಾಕ್ಷಿದಾರರು ತಾನು ಹಾಜರುಪಡಿಸಿರುವ ದಾಖಲೆಯನ್ನು ನೋಡಿ ಬ್ರಹ್ಮದೇವಯ್ಯ ರವರ ಹೆಸರಿನಲ್ಲಿರುವ ದಾಖಲೆ ಇರುವುದಿಲ್ಲ ಎನ್ನುವರು. ಬ್ರಹ್ಮದೇವಯ್ಯ ರವರು ಜಗದೀಶ್ ರವರಿಗೆ ದಾನಪತ್ರ ಬರೆದುಕೊಟ್ಟಿದ್ದು ಸದರಿ ದಾನಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ದಾನಪತ್ರದ ಆಧಾರದ ಮೇರೆಗೆ ಜಗದೀಶ್ ರವರ ಹೆಸರಿಗೆ ಖಾತೆಯಾಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಜಗದೀಶರವರ ಹೆಸರಿನಲ್ಲಿರುವ ಖಾತೆಯನ್ನು ನಾನು ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಬ್ರಹ್ಮದೇವಯ್ಯ ರವರಿಂದ ಜಗದೀಶ ರವರಿಗೆ ಯಾವಾಗ ದಾನಪತ್ರವಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಬ್ರಹ್ಮದೇವಯ್ಯ ರವರಿಂದ ಜಗದೀಶ ರವರಿಗೆ ಯಾವುದೇ ಖಾತೆಯಾಗಿರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಗದೀಶ ರವರಿಂದ ಅರುಣ್‌ಗೌಡ ರವರಿಗೆ ಯಾವಾಗ ಕ್ರಯಪತ್ರವಾಗಿರುತ್ತದೆ ಎಂದು ನನಗೆ ನೆನಪಿರುವುದಿಲ್ಲ. ಅರುಣ್‌ಗೌಡ ರವರ ಹೆಸರಿಗೆ ಖಾತೆಯಾಗಿರುತ್ತದೆ. ಸದರಿ ಅರುಣ್

ಗೌಡ ರವರು ಜಗದೀಶ ರವರ ಜಿ.ಪಿ.ಎ ಹೋಲ್ಡರ್ ಆದ ಎಸ್.ಬಿ.ಸತೀಶಕುಮಾರ ರವರಿಗೆ ಕ್ರಯದ ಬಾಬ್ತು ಹಣವನ್ನು ಕೆಲವು ಚೆಕ್ಕುಗಳ ಮೂಲಕ ನೀಡಲಾಗಿರುತ್ತದೆ ಎಂದು ಕ್ರಯಪತ್ರದಲ್ಲಿ ನಮೂದಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಕ್ರಯದ ಬಾಬ್ತು ನೀಡಿದ್ದ ಚೆಕ್ಕುಗಳು ಅಮಾನ್ಯಗೊಂಡಿರುತ್ತವೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಅರುಣ್‌ಗೌಡ ರವರು 96*120 ಅಡಿ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. ಅದರ ಪೈಕಿ 40*96 ಅಡಿ ಆಸ್ತಿಯನ್ನು ನಾನು ಖರೀದಿ ಮಾಡಿರುತ್ತೇನೆ. ನಾನು ಆಸ್ತಿ ಖರೀದಿ ಮಾಡಿದ ಪಕ್ಕದಲ್ಲಿ ವೆಂಕಟೇಶ ಎಂಬುವವರು ಸಹ 40*96 ಅಡಿ ಆಸ್ತಿಯನ್ನು, ರುದ್ರಪ್ಪ ಎಂಬುವವರು 40*96 ಅಡಿ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. ಸದರಿ ಆಸ್ತಿಗಳನ್ನು ಖರೀದಿಸುವ ಸಮಯದಲ್ಲಿ ನಕಾಶೆಯನ್ನು ತಯಾರಿಸಲಾಗಿರುತ್ತದೆ. ಸದರಿ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.